

# ಆಕಂಪನ

■ ಕಂನಾಡಿಗಾ ನಾರಾಯಣ

ಕಲೆ: ಎಸ್.ವಿ. ಹೂಗಾರ್

ಆ್ಯಪ್‌ನ ಡಿ.ಪಿ.ಗೂ ಫೋಟೋವನ್ನು ಹಾಕಿರಲಿಲ್ಲ. ನನಗೂ ನನ್ನ ಫೋಟೋಗಳನ್ನು ಹಾಕಬೇಕು, ನನ್ನ ಸೌಂದರ್ಯವನ್ನು ಜಗತ್ತಿಗೆ ತೋರ್ಪಡಿಸಬೇಕು ಎಂಬ ಆಸೆ ಇರುವುದು ಸಹಜ. ಆದರೆ ಹಾಗೆ ಸೀಕ್ರೆಸಿಯನ್ನು ಕಾಪಾಡಿಕೊಂಡಾಗಲೇ ಜನಗಳಲ್ಲಿ ನಮ್ಮ ಬಗ್ಗೆ ಇನ್ನಷ್ಟು, ಮತ್ತಷ್ಟು ಕುತೂಹಲ ಕೆರಳಿಸಲು ಸಾಧ್ಯ ಎಂಬುದು ನನ್ನ ಬಲವಾದ ನಂಬಿಕೆಯಾಗಿತ್ತು.

ಆದಾಗ್ಯೂ ಒಂದು ದಿನ ಒಬ್ಬ ಅಭಿಮಾನಿ ನನ್ನನ್ನು ಗುರುತಿಸಿಯೇ ಬಿಟ್ಟ. ನನ್ನ ಕಾರ್ಯಕ್ರಮ ಮುಗಿದು ಎರಡು ಗಂಟೆಗಳ ನಂತರ ಹೊರಹೋದರೂ ನನಗಾಗಿಯೇ ಕಾಯುತ್ತಿದ್ದ ಆತ, 'ನೀವು ಆವಂತಿಕಾ ಅಲ್ಲವಾ?' ಅಂದ. ನಾನು ಗಾಬರಿಬಿದ್ದು 'ಅಲ್ಲ...' ಅಂದೆ. 'ನನಗೆ ಗೊತ್ತು ಮೇಡಂ, ನೀವೇ ಆವಂತಿಕಾ ಅಂಥ. ನಿಮ್ಮ ಧ್ವನಿಯೇ ಸಾಕು, ನಿಮ್ಮನ್ನು ಆವಂತಿಕಾ ಅಂತ ಗುರುತಿಸಲು' ಎಂದ. ಆ ಕ್ಷಣ ನನ್ನ ಧ್ವನಿಯನ್ನು ಬದಲಾಯಿಸಲು ಪ್ರಯತ್ನಿಸಿದೆನಾದರೂ ಅದು ಕೃತಕ ಅಂತ ಅವನಿಗಿರಲಿ, ನನಗೇ ಅನಿಸಿಬಿಟ್ಟಿತು. ಹೇಗೋ ಟ್ರಾಫಿಕ್‌ನ ಮಧ್ಯೆ ಆಕ್ಟೀವಾವನ್ನು ನುಗ್ಗಿಸಿಕೊಂಡು, ಅವನು ನನ್ನನ್ನು ಫಾಲೋ ಮಾಡಲು ಸಾಧ್ಯವೇ ಇಲ್ಲದಂತೆ ತಪ್ಪಿಸಿಕೊಂಡು ಮನೆ ಸೇರಿಕೊಂಡಿದ್ದೆ.

ಆದರೆ ಅವನು ಎಂಥ ಉತ್ಕಟ ಪ್ರೇಮಿ ಎಂದರೆ, ನನ್ನ ಸೌಂದರ್ಯದ ಬಗ್ಗೆ, ಜಾತಿಯ ಬಗ್ಗೆ, ಧರ್ಮದ ಬಗ್ಗೆ ತಲೆಕೆಡಿಸಿಕೊಳ್ಳದೇ ಕೇವಲ ನನ್ನ ಭಾಷೆಯ, ನನ್ನ ಧ್ವನಿಯ ಆರಾಧಕನಾಗಿ ನನ್ನನ್ನು ಸೆಳೆದೇಬಿಟ್ಟ. ನಾನೂ ಮನಸೋತುಬಿಟ್ಟೆ. ಹಾಗಂಥ ನಾನೇನು ಕೆಟ್ಟದಾಗಿ ಇರಲಿಲ್ಲ. ಯಾವ ಸಿನಿಮಾ ನಟಿಗಿಂತಲೂ ಕಡಿಮೆ ಇಲ್ಲದ ನನ್ನ ಸೌಂದರ್ಯವನ್ನು ಅವನು ಮನಸಾರೆ ಆಸ್ವಾದಿಸಿದ. 'ಒಂದು ವೇಳೆ ನೀವು ಸಿನಿಮಾವನ್ನೇನಾದರೂ ಸೇರಿದ್ದರೆ, ಲಕ್ಷಾಂತರ ಅಭಿಮಾನಿಗಳು ಮಾನಸಿಕವಾಗಿ ನಿಮ್ಮನ್ನು ಆರಾಧಿಸುತ್ತಿದ್ದರೆ, ಅದನ್ನು ನೋಡಿಕೊಂಡು ಬದುಕುಳಿಯಲು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ' ಎನ್ನುವಷ್ಟು ಸ್ವಾರ್ಥಿ ಅವನಾಗಿದ್ದ.

ಚಿರಂತನ್ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ. ಇಬ್ಬರ ಮನೆಯವರೂ ಒಪ್ಪಿದರು. ವರ್ಷವಾಯಿತು, ಎರಡು ವರ್ಷವಾಯಿತು. ಸುಂದರವಾದ ಮಗನೂ ಹುಟ್ಟಿದ. ನನ್ನದೇ ಸ್ವಂತ ಮನೆ, ಗಂಡ, ಮಗ... ಸ್ವರ್ಗಕ್ಕೆ ಕಿಚ್ಚು ಹಚ್ಚಲು ಇನ್ನೇನು ಬೇಕು? ನೆಮ್ಮದಿಯಾಗಿದ್ದೆ. ಅಷ್ಟಾದರೂ ನನ್ನ ನೇರ ಕಾರ್ಯಕ್ರಮಕ್ಕೆ ಬರುತ್ತಿದ್ದ ಕರೆಗಳಲ್ಲಿ ಯಾವುದೇ ವ್ಯತ್ಯಾಸವಾಗಿರಲಿಲ್ಲ. ಏಕೆಂದರೆ ಆ ಬಗ್ಗೆ ನಾನು ಒಂದೇ ಒಂದು ಸುಳಿವನ್ನೂ ಕೇಳುಗರಿಗೆ ನೀಡಿರಲಿಲ್ಲ. ಸಿನಿಮಾ ನಟಿಯರು ಹೇಗೆ ತಮ್ಮ ಮದುವೆಯ ಗುಟ್ಟನ್ನು ಕಾಪಿಡುತ್ತಾರೋ ಹಾಗೆಯೇ ನಾನೂ ಕಾಯ್ದುಕೊಂಡಿದ್ದೆ. ಏಕೆಂದರೆ ಶ್ರೋತೃಗಳ ಸಂಖ್ಯೆ ಕಡಿಮೆಯಾಗಬಾರದಲ್ಲ!

ಒಂದು ದಿನ ಯಾಕೋ ಇದ್ದಕ್ಕಿದ್ದಂತೆ ಕಾರ್ಯಕ್ರಮದ ಮಧ್ಯೆಯೇ ತಲೆನೋವು ಶುರುವಾಯಿತು. ಅದು ನೇರ ಪ್ರಸಾರ ಬೇರೆ. ತೋರ್ಪಡಿಸಿಕೊಳ್ಳುವಂತಿಲ್ಲ. ಹೇಗೋ ಕಣ್ಣು ಮುಚ್ಚಿ ನಿಭಾಯಿಸಿಕೊಂಡು ಅತ್ತ ಹಾಡೊಂದನ್ನು ಹಾಕಿ ಇತ್ತ ಮಾತ್ರೆ ತರಿಸಿ ನುಂಗಿದೆ. ಸ್ವಲ್ಪ ರಿಲ್ಯಾಕ್ಸ್ ಅನಿಸಿತು. ಮತ್ತೆ ಫೋನ್ ಕಾಲ್‌ಗಳು... ಮಧ್ಯೆ ಮತ್ತೊಮ್ಮೆ ಹೆಚ್ಚು ಡಿಕಾಕ್ಷನ್ ಹಾಕಿಸಿದ ಬಿಸಿಬಿಸಿ ಫಿಲ್ಟರ್ ಕಾಫಿ ತರಿಸಿಕೊಂಡು ಕುಡಿದೆ. ಆಹಾ, ಏನಿದು ಸ್ವಾದ ಎಂದು ಲೈವ್ ಆಗಿಯೇ ಬಿತ್ತರಿಸಿದೆ. ಕೇಳುಗರು ನನ್ನೊಂದಿಗೆ ಕಾಫಿ